# ಗಾಂಧಿಮಾರ್ಗ ನೆನಪಿಸಿದ ರೈತ ಚಳವಳಿ



1

ಕೇಂದ್ರ ಸರ್ಕಾರ ಜಾರಿಗೊಳಿಸಿದ ಮೂರು ಕೃಷಿ ಕಾಯ್ದೆಗಳನ್ನು ಹಿಂತೆಗೆದುಕೊಳ್ಳಬೇಕೆಂದು ಒತ್ತಾಯಿಸಿ ರೈತರು ನಡೆಸಿದ ಚಳವಳಿಗೆ ಜಾಗತಿಕ ಮಹತ್ವವಿದೆ. 2020ರ ಆಗಸ್ಟ್ ತಿಂಗಳಲ್ಲಿ ಆರಂಭವಾದ ರೈತರ ಪ್ರತಿಭಟನೆ, ಒಂದು ವರ್ಷಕ್ಕೂ ಹೆಚ್ಚು ಕಾಲ ನಿರಂತರವಾಗಿ ನಡೆದು, 2021ರ ನವೆಂಬರ್‌ನಲ್ಲಿ ವಿವಾದಕ್ಕೆ ಕಾರಣವಾದ ಕಾಯ್ದೆಗಳನ್ನು ಸರ್ಕಾರ ಹಿಂತೆಗೆದುಕೊಳ್ಳುವುದರೊಂದಿಗೆ ತಾರ್ಕಿಕ ಅಂತ್ಯ ಕಂಡಿತು.

ರೈತ ಚಳವಳಿ ಸವೆಸಿದ ಹಾದಿಯಲ್ಲಿ ಹೂವಿಗಿಂತಲೂ ಕಲ್ಲುಮುಳ್ಳುಗಳೇ ಹೆಚ್ಚಾಗಿದ್ದವು. ಆ ಮುಳ್ಳುಗಳಲ್ಲಿ ರೈತರನ್ನು ಪ್ರತಿಬಂಧಿಸುವ ಉತ್ಸಾಹದಲ್ಲಿ ವ್ಯವಸ್ಥೆ ರಸ್ತೆಯಲ್ಲಿ ನಾಟಿ ಮಾಡಿದ್ದ ಮುಳ್ಳುಗಳೂ ಇದ್ದವು. ಜೀವವನ್ನು ಹಿಂಡುವಂಥ ತೀವ್ರ ಚಳಿ ಹಾಗೂ ಕೊರೊನಾ ವೈರಾಣುವಿನ ದಾಳಿಯ ಆತಂಕಕ್ಕೆ ಕೂಡ ರೈತರ ಸ್ಥೈರ್ಯವನ್ನು ಅಲುಗಾಡಿಸುವುದು ಸಾಧ್ಯವಾಗಲಿಲ್ಲ.

ಪ್ರತಿಭಟನೆಯ ನಿಟ್ಟಿನಲ್ಲಿ ರೈತರು ಅನುಸರಿಸಿದ ವಿಧಾನ ಗಾಂಧಿಮಾರ್ಗಕ್ಕೆ ಸಮೀಪವಾಗಿತ್ತು. 'ಸಂಯುಕ್ತ ಕಿಸಾನ್ ಮೋರ್ಚಾ' ನೇತೃತ್ವದಲ್ಲಿ ದೆಹಲಿಯ ಸಿಂಘು, ಗಾಜೀಪುರ ಹಾಗೂ ಟಿಕ್ರಿ ಗಡಿಗಳಲ್ಲಿ ರೈತರು ಠಿಕಾಣಿ ಹೂಡಿದರು. ಪ್ರತಿಭಟನೆ, ಘೇರಾವ್‌ಗಳ ರೂಪದಲ್ಲಿ ನಡೆದ ಚಳವಳಿಯಲ್ಲಿ ಪಂಜಾಬ್, ಹರಿಯಾಣ ಹಾಗೂ ಉತ್ತರಪ್ರದೇಶದ ರೈತರು ದೊಡ್ಡ ಸಂಖ್ಯೆಯಲ್ಲಿ ಭಾಗವಹಿಸಿದ್ದರಾದರೂ, ದೇಶದ ಎಲ್ಲ ಭಾಗಗಳಲ್ಲಿ ರೈತ ಚಳವಳಿಗೆ ಪ್ರತ್ಯಕ್ಷ–ಅಪರೋಕ್ಷ ಬೆಂಬಲ ವ್ಯಕ್ತವಾಯಿತು.

ರಾಜಕಾರಣಿಗಳಿಂದ ಅಂತರ ಕಾಪಾಡಿಕೊಂಡು, ರೈತ ಮುಖಂಡರೇ ನಡೆಸಿದ ಈ ಪ್ರತಿಭಟನೆ ಅಹಿಂಸೆ ಹಾಗೂ ಸತ್ಯಾಗ್ರಹ ತತ್ವಗಳನ್ನು ಅನುಸರಿಸಿತು. 2021ರ ಜನವರಿ 26ರಂದು ರೈತ ಗಣರಾಜ್ಯೋತ್ಸವದ ಹೆಸರಿನಲ್ಲಿ ದೆಹಲಿಯಲ್ಲಿ ನಡೆಸಿದ ಟ್ರ್ಯಾಕ್ಟರ್ ರ್‍ಯಾಲಿಯಲ್ಲಿ ಸಾವುನೋವು ಸಂಭವಿಸಿದರೂ, ಆ ಅಹಿತಕರ ಘಟನೆಗಳ ಹಿಂದೆ ಮೂರನೆಯವರ ಹಸ್ತಕ್ಷೇಪದ ಅನುಮಾನ ಇದ್ದೇಇದೆ. ಉತ್ತರಪ್ರದೇಶದ ಲಖೀಂಪುರ–ಖೇರಿಯಲ್ಲಿ ರೈತರ ಮೇಲೆ ಕಾರು ಹರಿಸಿದ ಪ್ರಕರಣ ಉದ್ದೇಶಪೂರ್ವಕವಾದುದು ಎಂದು ತನಿಖಾಧಿಕಾರಿಗಳು ವರದಿ ಸಲ್ಲಿಸಿರುವ ಹಿನ್ನೆಲೆಯಲ್ಲಿ, ಜನವರಿ 26ರ ಘಟನೆಯನ್ನೂ ಪುನರ್ ಪರಿಶೀಲಿಸಬೇಕಾಗಿದೆ.

ಜಾಗತಿಕ ವೇದಿಕೆಗಳಲ್ಲಿ ಭಾರತದ ರೈತರ ಪ್ರತಿಭಟನೆಗೆ ಸಹಾನುಭೂತಿ ವ್ಯಕ್ತವಾಯಿತು. ಆದರೆ, ದೇಶದೊಳಗೇ ಪ್ರತಿಭಟನಾನಿರತ ರೈತರ ಚಾರಿತ್ರ್ಯಹರಣದ ಪ್ರಕರಣಗಳು ನಡೆದವು. ನಕಲಿ ರೈತರು, ಖಲಿಸ್ತಾನಿಗಳೆಂದು ಕರೆದು ರೈತ ಪ್ರತಿಭಟನೆಯ ವಿರುದ್ಧ ನಾಗರಿಕರಲ್ಲಿ ಅಸಹನೆ ಹುಟ್ಟಿಸುವ ಪ್ರಯತ್ನಗಳು ನಡೆದವು. ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಕೆಲವು ಸಚಿವರು ಚಳವಳಿಯ ಪ್ರಾಮಾಣಿಕತೆಯ ಕುರಿತು ಅಪಸ್ವರ ಎತ್ತಿದರು. ಶಾಂತಿಯುತವಾಗಿ ಪ್ರತಿಭಟನೆ ನಡೆಸುವ ರೈತರ ಹಕ್ಕನ್ನು ಸುಪ್ರೀಂಕೋರ್ಟ್ ಒಪ್ಪಿಕೊಂಡರೂ, ರಸ್ತೆ ಸಂಚಾರಕ್ಕೆ ಅಡಚಣೆ ಉಂಟುಮಾಡುವ ಹಕ್ಕು ಯಾರಿಗೂ ಇಲ್ಲ ಎಂದು ಹೇಳಿತು. ಈ ಎಲ್ಲ ಅಡೆತಡೆ–ವಿರೋಧಗಳನ್ನು ರೈತರು ಸಹನೆಯಿಂದಲೇ ಎದುರಿಸಿದರು ಹಾಗೂ ಒಗ್ಗಟ್ಟಿನೊಂದಿಗೆ ಪ್ರತಿಭಟನೆಯ ಕಾವನ್ನು ಉಳಿಸಿಕೊಂಡರು.

ರೈತರ ಪ್ರತಿರೋಧಕ್ಕೆ ಮಣಿದೋ, ಚುನಾವಣಾ ಲೆಕ್ಕಾಚಾರದ ಕಾರಣದಿಂದಲೋ ಜನವರಿ 19ರಂದು ವಿವಾದವಿರೋಧಕ್ಕೆ ಕಾರಣವಾದ ಮೂರು ಕಾಯ್ದೆಗಳನ್ನು ಹಿಂತೆಗೆದುಕೊಳ್ಳುವುದಾಗಿ ಪ್ರಧಾನಿ ಘೋಷಿಸಿದರು. ಸಂಸತ್ತು ಕೂಡ ಹಸಿರುನಿಶಾನೆ ತೋರಿತು. ಕೃಷಿ ಉತ್ಪನ್ನಗಳಿಗೆ ಕನಿಷ್ಠ ಬೆಂಬಲ ಬೆಲೆ ಸೇರಿದಂತೆ ರೈತರ ಎಲ್ಲ ಬೇಡಿಕೆಗಳನ್ನು ಈಡೇರಿಸುವುದಾಗಿ ಸರ್ಕಾರ ಲಿಖಿತವಾಗಿ ತಿಳಿಸಿದ ನಂತರ ಪ್ರತಿಭಟನಾಕಾರರು ದೆಹಲಿ ಗಡಿಗಳಿಂದ ತಮ್ಮೂರಿಗೆ ಮರಳಿದರು.

ವರ್ಷಕ್ಕೂ ಹೆಚ್ಚು ಕಾಲದ ನಂತರ ಊರುಗಳಿಗೆ ಮರಳುವಾಗಲೂ, ತಾವು ತಾತ್ಕಾಲಿಕವಾಗಿ ನೆಲೆಸಿದ್ದ ಪ್ರತಿಭಟನಾ ಸ್ಥಳಗಳನ್ನು ಸ್ವಚ್ಛಗೊಳಿಸುವ ಮೂಲಕ ರೈತರು ಮೇಲ್ಪಂಕ್ತಿಯೊಂದನ್ನು ಹಾಕಿಕೊಟ್ಟರು. ಪ್ರತಿಭಟನಾ ಸ್ಥಳಗಳು ಬಡ ಹಾಗೂ ಕೊಳೆಗೇರಿ ಮಕ್ಕಳಿಗೆ ಅನ್ನದಾಸೋಹದ ಸ್ಥಳಗಳೂ ಆಗಿದ್ದವು ಎನ್ನುವ ವರದಿಗಳನ್ನು ನೋಡಿದರೆ, ವ್ಯಾಪಾರೀಕರಣದ ಸಂದರ್ಭದಲ್ಲೂ 'ಅನ್ನದಾತ' ಎನ್ನುವ ರೈತ ವಿಶೇಷಣಕ್ಕೆ ಜೀವಕಳೆಯಿಂದ ಕೂಡಿರುವಂತೆ ಭಾಸವಾಗುತ್ತದೆ.



## ಒಗ್ಗಟ್ಟಿನ ಪಾಠದ ಒಲಿಂಪಿಕ್ಸ್

2

ಪ್ರತಿ ನಾಲ್ಕು ವರ್ಷಗಳಿಗೊಮ್ಮೆ ವಿಶ್ವದ ದೊಡ್ಡ ಕ್ರೀಡಾಕೂಟ ಒಲಿಂಪಿಕ್ಸ್ ಸಮೀಪಿಸುತ್ತಿದ್ದಂತೆ ಜನರಲ್ಲಿ ಅತೀವ ಸಂಭ್ರಮ ಮನೆಮಾಡುತ್ತದೆ. ಕ್ರೀಡಾಹಬ್ಬಕ್ಕಾಗಿ ವರ್ಷಕ್ಕೂ ಮೊದಲೇ 'ಕೌಂಟ್ ಡೌನ್' ಆರಂಭವಾಗುತ್ತದೆ. ಆದರೆ, 2021ರ ಒಲಿಂಪಿಕ್ಸ್ ಸಮೀಪಿಸಿದಷ್ಟೂ ಕ್ರೀಡಾಪ್ರೇಮಿಗಳಲ್ಲಿ ಆತಂಕ ಹೆಚ್ಚಾಗುತ್ತಲೇ ಇತ್ತು. ಜಗತ್ತಿನ ಮಾನವ ಕುಲಕ್ಕೆ ಕೋವಿಡ್ ಆತಂಕ ಆವರಿಸಿರುವಾಗ, ಜನ ಬದುಕಲು ಹರಸಾಹಸ ಪಡುತ್ತಿರುವಾಗ, ಕ್ರೀಡಾಕೂಟದ ಮಾತೆಲ್ಲಿ?

ಕೋವಿಡ್ ಭೀತಿ, ಆತಿಥ್ಯ ರಾಷ್ಟ್ರದ ಕೆಲವರಿಂದಲೇ ಟೂರ್ನಿ ಆಯೋಜನೆಗೆ ವಿರೋಧ, ಟೂರ್ನಿಯಿಂದ ಹಿಂದೆ ಸರಿಯುವ ಹಲವು ಕ್ರೀಡಾಪಟುಗಳ ನಿರ್ಧಾರದ ಆತಂಕದ ನಡುವೆಯೂ ಅಂತರರಾಷ್ಟ್ರೀಯ ಒಲಿಂಪಿಕ್ಸ್ ಸಮಿತಿ ದಿಟ್ಟತನದಿಂದ ಟೂರ್ನಿ ಸಂಘಟಿಸಿತು. ಆತಿಥ್ಯ ವಹಿಸಿದ್ದ ಜಪಾನ್ ಜಗತ್ತೇ ಭೇಷ್ ಎನ್ನುವಂತೆ ಯಶಸ್ವಿಯವಾಗಿ ಕ್ರೀಡಾಕೂಟ ನಡೆಸಿ, ಕೋವಿಡ್‌ನಿಂದ ಮಂಕು ಕವಿದಿದ್ದ ಮನಸ್ಸುಗಳಿಗೆ ಉಲ್ಲಾಸದ ಪ್ರೀತಿ ಒದಗಿಸಿತು.

ಹೀಗಾಗಿ ಈ ಬಾರಿಯ ಟೋಕಿಯೊ ಒಲಿಂಪಿಕ್ಸ್